ನಿದ್ದೆ ಕಲಸುಮೇಲೋಗರವಾಗಿತ್ತು. ಅನಂತರ ಮುಂದಿನ ನಾಲ್ಕೈದು ದಿನಗಳು ತನ್ನ ಕಚೇರಿ, ನಗರ ಮತ್ತು ಯೂನಿವರ್ಸಿಟಿಯ ಕ್ಯಾಂಪಸ್ ತೋರಿಸುವುದಲ್ಲಿ ಕಳೆದು ಹೋದವು.

ಅದೊಂದು ದಿನ ನಾನು ಕೈಲಿ ಮತ್ತು ಕೈಟಿಗೆ ಅವರ ಪರಸ್ಪರ ಪರಿಚಯವನ್ನು ಮಾಡಿಸಿದೆ. ಮರುದಿನ ರಾತ್ರಿ ಕೈಲಿ, ನನಗೆ ಈ ಹೆಂಗಸು ಇಷ್ಟವಾಗಲಿಲ್ಲ ಎಂದಳು. ಬಹುಶಃ ನೀನೂ ಸಹ ಅವಳಿಗೆ ಇಷ್ಟವಾಗಲಿಲ್ಲವೇನೋ ಎಂದೆ ನಾನು.

"ಇಷ್ಟವಾಗದಿದ್ದರೆ, ತೊಂದರೆಯಿಲ್ಲ. ನನಗೆ ಅವಳಿಂದೇನಾಗಬೇಕಿದೆ?" ಎಂದಳು ಕೈಲಿ.

ನಾನು ಕೈಲಿಯನ್ನು ಇಲೇನಳೊಂದಿಗೆ ಭೇಟಿ ಮಾಡಿಸಿದಾಗ ಅವಳಿಗೆ ತುಂಬಾ ಖುಷಿಯಾಯಿತು. ಇಲೇನ್ ತನ್ನ ವಾಕಿಂಗ್ ಸ್ಟಿಕ್ಕನ್ನು ನಿಲ್ಲಿಸಿ, ಗೋಡೆಗೊರಗಿ ಕೈಲಿಯನ್ನು ತಬ್ಬಿಕೊಂಡಳು. ಅವಳ ಹಣೆಯನ್ನು ಚುಂಬಿಸಿ, ಸ್ವಾಗತಿಸಿದಳು. ಅವಳ ನೌಕರಿಗೆ ಶುಭ ಕೋರಿದ್ದಳು. ಅನಂತರ ನಗುತ್ತಾ ಹೇಳಿದ್ದಳು, "ನೀವು ಇಂಡಿಯಾಕ್ಕೆ ವಿವಾಹವನ್ನು ಮಾಡಿಕೊಳ್ಳಲು ಹೋದಾಗ, ನನ್ನನ್ನೂ ಜೊತೆಯಲ್ಲಿ ಕರೆದೊಯ್ಯಿರಿ. ಅದಕ್ಕಾಗಿ ನಾನು ರಜೆಯನ್ನೂ ಪಡೆಯಬೇಕಿಲ್ಲ".

"ನೀವು ವಿವಾಹದ ಸಂದರ್ಭದಲ್ಲಿ ನೃತ್ಯಿಸುವುದಾದರೆ ಮಾತ್ರ." ಎಂದಿದ್ದಳು ಕೈಲಿ. ನಾವೆಲ್ಲರೂ ನಕ್ಕಿದ್ದೆವು.

"ಹಾಗಾದರೆ ನಾನು ಖಂಡಿತ ಬರುತ್ತೇನೆ. ನಿಮ್ಮ ವಿವಾಹದಲ್ಲಿ ಡ್ಯಾನ್ಸ್ ಮಾಡಿದರೆ ನನ್ನ ಶರೀರ ಸರಿಯಾಗುವುದು."

"ಇಲೇನ್, ವಿವಾಹದಲ್ಲಿ ನೃತ್ಯಿಸಲು ನೀನು ವ್ಯವಸ್ಥೆಯನ್ನು ಮಾಡಬೇಕಾಗುವುದು." ನಾನು ಹೇಳಿದೆ, "ಮೊದಲು ನಾವು ಕೋರ್ಟಿನಲ್ಲಿ ಮದುವೆಯಾಗುತ್ತೇವೆ. ಕೈಲಿಗೆ ಗ್ರೀನ್ ಕಾರ್ಡ್ ಸಿಕ್ಕ ಅನಂತರ ಇಂಡಿಯಾಕ್ಕೆ ಹೋಗುವ ಬಗ್ಗೆ ಯೋಚಿಸುತ್ತೇವೆ".

"ನಾನೆಲ್ಲಿ ಓಡಿಹೋಗುತ್ತೇನೆ. ಕೈಟಿಯ ಗಂಡ ಅವಳೊಂದಿಗೆ ಕಾಯಂ ಆಗಿರಲು ಮರಳಿ ಬರುತ್ತಿದ್ದಾನೆಂಬ ಸುದ್ದಿಯನ್ನು ಕೇಳಿದೆಯಾ? ಈ ವದಂತಿಯನ್ನು ನಾನು ಐದು ದಿನಗಳಿಂದ ಕೇಳುತ್ತಿದ್ದೆ, ಆದರೆ ನಿನ್ನೆ ರಾತ್ರಿ ನನ್ನ ಸ್ನೇಹಿತೆಯೊಬ್ಬಳು ಫೋನ್ ಮಾಡಿ ವಿಷಯವನ್ನು ದೃಢಪಡಿಸಿದಳು."

"ಓಹೋ, ವಿಚ್ಛೇದನ ಕೊಟ್ಟು ಮೂರು ವರ್ಷಗಳ ಅನಂತರವೂ!" ಎಂದೆ ನಾನು.

"ಪಾಲ್, ಇದು ವಿಚಿತ್ರ ವಿಷಯವೇನಲ್ಲ. ಅದೆಷ್ಟೋ ವಿಚ್ಛೇದಿತರು ಎರಡನೆಯ ಬಾರಿಗೆ ಮತ್ತೆ ಮದುವೆ ಮಾಡಿಕೊಳ್ಳುತ್ತಾರೆ."

ತುಂಬಾ ಹೊತ್ತಿನಿಂದ ನಿಂತ ಇಲೇನ್ ನನಗೆ ದಣಿದಂತೆ ಕಂಡಳು, "ಇಲೇನ್, ನೀವೀಗ ವಿಶ್ರಾಂತಿಯನ್ನು ಪಡೆಯಿರಿ. ಬೇಗನೇ ನಾವು ನಿಮ್ಮ ಕುತೂಹಲದ ಸಂಗತಿಯನ್ನು ಕೇಳುತ್ತೇವೆ".

ಮುಂದಿನ ಭಾನುವಾರ ಮತ್ತೆ ನನ್ನ ಮನೆಯ ಬಾಗಿಲ ಗಂಟೆ ಬಾರಿಸಿತು. ಬಾಗಿಲನ್ನು ತೆರೆದಾಗ ಎದುರಿಗೆ ಕೈಟಿ ಇದ್ದಳು.

"ಪಾಲ್, ನಾನು ನನ್ನ ಗೊಂಬೆಯನ್ನು ತೆಗೆದುಕೊಂಡು ಹೋಗಲು ಬಂದಿದ್ದೇನೆ."

"ಗೊಂಬೆ!" ನನಗೆ ಆಶ್ಚರ್ಯವಾಗಿತ್ತು. ಕೈಟಿಗೆ ಗೊಂಬೆಯ ಪತ್ತೆ ತಿಳಿದಿತ್ತು. ಅವಳು ಇಲ್ಲೇಕೆ ಗೊಂಬೆಯನ್ನಿಟ್ಟಿದ್ದಳು ಎಂಬುದು ಅವಳಿಗೆ ತಿಳಿದಿತ್ತು. ನನಗೇಕೆ ಹೇಳಲಿಲ್ಲ? ನಾನು ಚಿಂತೆಗೊಳಗಾದೆ. ನಾನು ಚಿಂತೆಯನ್ನು ಹತ್ತಿಕ್ಕಿಕೊಂಡು ಕೈಟಿಗೆ ಕೇಳಿದೆ: "ನೀವು ಯಾವ ಗೊಂಬೆಯ ಬಗ್ಗೆ ಹೇಳುತ್ತಿದ್ದೀರಿ?"

"ರವಿಕೆ ಕೆಂಪಗಿದ್ದು, ಭುಜಗಳು ನಗ್ನವಾಗಿದ್ದವಲ್ಲ, ಆ ಗೊಂಬೆ."

"ನೀವು ಆ ಗೊಂಬೆಯನ್ನು ಉಡುಗೊರೆಯಾಗಿ ಕೊಟ್ಟಿರಲಿಲ್ಲವೇ?" ನಾನು ಬೇಕಂತಲೇ ಕೇಳಿದೆ.

"ಉಡುಗೊರೆ? ಪಾಲ್, ನೀನು ದಂಡ ಕೊಡಬೇಕು."